ಸಾಮಾಜಿಕ ಸಾಮರಸ್ಯವೇ ಇಲ್ಲದ ಈ ಸಮಾಜದಲ್ಲಿ ಈ ಪ್ರಶ್ನೆ ಎಷ್ಟು ಪ್ರಸ್ತುತ ಅನ್ನೋದನ್ನ ಯೋಚಿಸಬೇಕಾಗುತ್ತೆ. ಸಂವಿಧನಾತ್ಮಕ ಕೊಡುಗೆ ಕೊಟ್ಟಿದೆ ಇಲ್ಲ ಅನ್ನಲ್ಲ. ಆದರೆ ಅವರು ಅವುಗಳನ್ನು ಕೇಳಿ ಪಡೆಯಬಹುದಾದ ಹಕ್ಕುಗಳಿವೆ, ಸೌಕರ್ಯಗಳಿವೆ ಅಂತ ಅವರಿಗೇ ತಿಳಿಸಿ ಹೇಳುವಂತಹ ಪರಿಸ್ಥಿತಿ ಇವತ್ತಿನವರೆಗೂ ಇದೆ. ಅವರಿಗೆ ಸಿಗಬೇಕಾದ ಸೌಲಭ್ಯ ಸವಲತ್ತುಗಳೆಲ್ಲಾ ಹೇಗೆ ಅಪವ್ಯಯ ಆಗ್ತಿವೆ ಅನ್ನೋದಕ್ಕೆ ಓಂದು ಸಣ್ಣ ಉದಾಹರಣೆ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡಗಳ ಉಪಯೋಜನೆ. ಈ ಒಂದು ಕಾಯ್ದೆ 2013ರಲ್ಲಿ ಪ್ರಾರಂಭ ಆಗಿದ್ದು. ಆವಾಗಿನಿಂದಲೂ ಅದರ ವಾರ್ಷಿಕ ಬಡ್ಜೆಟ್ ಈ 2019–20ರ ಸಾಲಿನ ಅವಧಿಗೆ 34,550 ಕೋಟಿ. ಕಾಯ್ದೆಯ ಉದ್ದೇಶ ಏನ್ನೊತ್ತ ಆ ಜನರು ವಾಸಿಸುವ ಪ್ರದೇಶ, ಅವರ ಜೀವನ ರೀತಿ, ಅವರ ಶೈಕ್ಷಣಿಕ ಆರ್ಥಿಕ ಸ್ಥಿತಿಗತಿ ಒಟ್ಟಾರೆ ಅವರ ಸರ್ವಾಂಗೀಣ ಅಭಿವೃದ್ಧಿಗೆ ವಿನಿಯೋಗವಾಗುವುದು. ಈ ಕಾಯ್ದೆಯ ಅಡಿಯಲ್ಲಿ ಈ ಬಡ್ಜೆಟ್ಟು 37 ಅಭಿವೃದ್ಧಿ ಇಲಾಖೆಗಳ ಮೂಲಕ ಅನುಷ್ಠಾನಗೊಳ್ಳಬೇಕಿದೆ. ಇಷ್ಟಾದ್ರೂ ಈ ಕಾಯ್ದೆಯಲ್ಲಿನ ಲೋಪ ಏನಂದ್ರೇ ಇವತ್ತಿನ ಕಂಪ್ಯೂಟರೈಸ್ಡ್ ಯುಗದಲ್ಲೂ ಡಿಜಿಟಲೈಸ್ ಆಗದೇ ಇರೋದು. ಜತೆಗೆ ಮಧ್ಯವರ್ತಿಗಳ ಹಾವಳಿ, ಇಲಾಖೆಗಳ ಕ್ರಿಯಾಹೀನತೆ ಬೇರೆ. ಇದರ ಮೇಲೆ ಇರೋ ಮೊತ್ತದ ವೆಚ್ಚ ಭರಿಸೋಕೆ ವರ್ಷದ ಕೊನೇತನ ದೂಡಿ ಆಮೇಲೆ ಆತುರಾತುರವಾಗಿ ವೆಚ್ಚ ಭರಿಸುವ ಪ್ರಯತ್ನ ಮಾಡೋದರಿಂದ ಫಲಾನುಭವಿಗಳನ್ನ ನೈಜವಾಗಿ ಗುರುತಿಸೋಕೆ ಸಾಧ್ಯವಾಗಲ್ಲ. ಸಹಜವಾಗಿಯೇ ಅಲ್ಲಿ ನಕಲುಗಳು ಪುನರಾವರ್ತನೆಗಳು ನಡೆಯುತ್ತವೆ. ಇದು ಎಲ್ಲಾ ಮೇಲ್ನೋಟಕ್ಕೆ ಕಾಣತ್ತೆ.

ಇನ್ನು ಈ ತಳಸಮುದಾಯದ ಯುವಕರು ಪದವೀಧರರಾದ್ರೂ ಮುಂದಿನ ಗುರಿ ಕಾಣದೆ ದಿಕ್ಕಾಪಾಲಾಗ್ತಾರೆ. ಅವರು ಬದುಕುವ ಪರಿಸರ ಪರಿಸ್ಥಿತಿ ಅವರನ್ನ ಅಸಹಾಯಕರನ್ನಾಗಿಸುತ್ತದೆ. ಅಪ್ಪಅಮ್ಮ ಕೂಲಿನಾಲಿ ಮಾಡಿ ಒಪ್ಪತ್ತಿನ ಊಟ ಹೊಂಚೋ ಹೊತ್ಗೆ ಸೋತು ಸುಣ್ಣ ಆಗಿರ್ತಾರೆ. ಇಂತಹ ವಾತಾವರಣದಲ್ಲಿ ಸಹಜವಾಗಿ ತಿರುಗಿಬೀಳ್ತಾರೆ. ಎಲ್ಲಿ ಹಣ ಸಿಗುತ್ತೋ ಆ ಕಡೆಗೆ ಆಕರ್ಷಿತರಾಗ್ತಾರೆ. ಹೀಗೆ ಅವರ ದುರ್ಬಳಕೆ ಆಗತ್ತೆ. ಇದಕ್ಕೆ ಮುಖ್ಯ ಕಾರಣ ಅವರಿಗೆ ರಚನಾತ್ಮಕವಾದ ಒಂದು ಮಾರ್ಗದರ್ಶನದ ಕೊರತೆ. ಮೋಟಿವೇಶನ್ ಇಲ್ಲ. ಈ ಎಲ್ಲಾ ಅವ್ಯವಸ್ಥೆಯನ್ನ ಸರಿಪಡಿಸೋಕೆ ಒಬ್ಬನೇ ಒಬ್ಬ ಚೆನ್ನಾಗಿ ತರಬೇತುಗೊಂಡ, ನುರಿತ ರಾಜಕಾರಣಿ ಇಲ್ಲ. ಬಾಯಿಚಪಲಕ್ಕೆ ಮಾತಾಡೋರೇ ಜಾಸ್ತಿ. ತುಂಬಾ ಕೆಟ್ಟ ಪರಿಸ್ಥಿತಿಯಲ್ಲಿ ಇದ್ದೀವಿ ನಾವು.


## ಆನಂದ್ ಋಗ್ವೇದಿ

ಕತೆ, ಕವಿತೆ, ಪ್ರಬಂಧ, ವಿಮರ್ಶೆ, ನಾಟಕ, ಸಂಶೋಧನೆಯ ಕ್ಷೇತ್ರಗಳಲ್ಲಿ ಸದಾ ತೊಡಗಿಸಿಕೊಂಡಿರುವ ಆನಂದ ಋಗ್ವೇದಿ ಈ ತನಕ ಏಳು ಪುಸ್ತಕಗಳನ್ನು ಪ್ರಕಟಿಸಿದ್ದಾರೆ. 'ಜನ್ನ ಮತ್ತು ಅನೂಹ್ಯ ಸಾಧ್ಯತೆ', 'ಮತ್ತೊಮ್ಮೆ ನಕ್ಕ ಬುದ್ಧ', 'ಕಥಾಸ್ವರೂಪ', 'ಊರ್ಮಿಳಾ', 'ಅನುಭವದ ಅಮೃತತ್ವ', 'ನಿನ್ನ ನೆನಪಿಗೊಂದು ನವಿಲುಗರಿ' ಅವರ ಕೆಲವು ಪ್ರಕಟಿತ ಪುಸ್ತಕಗಳು.

ವಿಜ್ಞಾನದಲ್ಲಿ ಪದವಿ, ಕನ್ನಡದಲ್ಲಿ ಸ್ನಾತಕೋತ್ತರ ಪದವಿ, ಹಂಪಿ ಕನ್ನಡ ವಿಶ್ವವಿದ್ಯಾಲಯದಿಂದ ಪಿಎಚ್.ಡಿ. ಪದವಿ ಪಡೆದಿದ್ದಾರೆ. ಜಿಲ್ಲಾ ತರಬೇತಿ ಕೇಂದ್ರ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಸಂಪನ್ಮೂಲ ವ್ಯಕ್ತಿಯಾಗಿ ಆಡಳಿತ ಕನ್ನಡ ಮತ್ತು ಸೇವಾ ನಿಯಮಗಳ ಕುರಿತು ನೂರಾರು ತರಬೇತಿ ಉಪನ್ಯಾಸಗಳನ್ನು ನೀಡಿದ್ದಾರೆ. ದಾವಣಗೆರೆಯ ಚಿಗಟೇರಿ ಜಿಲ್ಲಾ ಆಸ್ಪತ್ರೆಯಲ್ಲಿ ಸಹಾಯಕ ಆಡಳಿತ ಅಧಿಕಾರಿ.